
ಡಾ.ವಿನೋದ ಛೆಬ್ಬಿ

ಸಾಯುವ ಕಾಲ ಬಂದಾಗ ಇನ್ನೇಕೆ ಸುಖಪಡಬೇಕು ಎನ್ನುವುದರ ಬದಲು, ಇನ್ನಾದರೂ ಸುಖಪಡಬೇಕು ಎಂದು ಯೋಚಿಸಿ!

# 340: ಹೊಸ ದಾರಿ - 80

ಕಳೆದ ಎರಡು ಕಂತುಗಳಲ್ಲಿ ಇಳಿವಯಸ್ಸಿನ ಒಂಟಿಗರ ಬಗೆಗೆ ಮಾತಾಡುತ್ತ, ಇವರಿಗೆ ಹೊಣೆಗಾರಿಕೆ ಇಲ್ಲದ ಸಾಂಗತ್ಯದ ಅಗತ್ಯವಿದೆ ಎಂದಿದ್ದೆ. ಇದಕ್ಕೆ ಪ್ರೋತ್ಸಾಹಕ ಪ್ರತಿಕ್ರಿಯೆ ಬರುತ್ತಿದೆ. ಹಲವಾರು ಜನರು ಸಂಗಾತಿಯನ್ನು ಬಯಸಿ ಮುಂದೆ ಬರುತ್ತಿದ್ದಾರೆ. ಕೌತುಕದ ವಿಷಯವೇನೆಂದರೆ, ಇವರೆಲ್ಲರೂ ಗಂಡಸರೇ ಆಗಿದ್ದಾರೆ! ಒಂಟಿ ಹೆಂಗಸರಿಗೆ ಇದರಲ್ಲಿ ಪಾಲುಗೊಳ್ಳದಿರಲು ಅವರದೇ ಆದ ಒತ್ತಡಗಳಿವೆ ಎಂದೆನಿಸುತ್ತದೆ. ಉದಾಹರಣೆಗೆ, ನಿವೃತ್ತಿ ಹೊಂದಿ ಸ್ವತಂತ್ರವಾಗಿ ನೆಮ್ಮದಿಯಿಂದ ಬಾಳುತ್ತಿರುವ ಒಂಟಿ ಮಹಿಳೆಯೊಬ್ಬರು ಸಾವಿಗೆ ಹೇಗೆ ತಯಾರಾಗುವುದು ಎನ್ನುವುದರ ಬಗೆಗೆ ತಿಳಿಸಿಕೊಡಿ ಎಂದು ವಿನಂತಿಸಿದ್ದಾರೆ. ಇವರಿಗೆ ಸಾಂಗತ್ಯದ ಕಡೆಗೆ ಗಮನ ಸೆಳೆದಾಗ ಬಂದ ಉತ್ತರ ಸಾರ್ವತ್ರಿಕ ಎನಿಸುವಂತಿದೆ: 'ಇಂಥದಕ್ಕೆಲ್ಲ ನಮ್ಮ ಸಮಾಜ ಒಪ್ಪುವುದಿಲ್ಲ; ನನ್ನ ಆತ್ಮೀಯರು ನನಗೆ ಸಾಥ್ ಕೊಡಲಾರರು'. ಇದರರ್ಥವೇನು? ಒಂದುವೇಳೆ ಒಂಟಿ ಹೆಂಗಸರು (ಒಂಟಿ ಗಂಡಸರಂತೆ) ಸಂಗಾತಿಯನ್ನು ಹುಡುಕಿಕೊಂಡು ಹೋಗುವುದು ರೂಢಿಯಲ್ಲಿದ್ದರೆ ಈಕೆ ಮರುಸಂಬಂಧವನ್ನು ಖಂಡಿತವಾಗಿಯೂ ಗಣಿಸುತ್ತಿದ್ದರು! ಈ ವಿಚಾರ ನನ್ನ ತಲೆತಿನ್ನಲು ಶುರುಮಾಡಿತು. ಮಹಿಳೆಯರ ವ್ಯಕ್ತಿ ಸ್ವಾತಂತ್ರ್ಯವು ರಾತ್ರೋರಾತ್ರಿ ಬಂದಿದ್ದಲ್ಲ. ಅದಕ್ಕಾಗಿ ಕ್ರಾಂತಿಗಳು ಅವಿರತ ನಡೆಯುತ್ತಲೇ ಬಂದಿವೆ. ಗಂಡ ಸತ್ತರೆ ನೂರು ವರ್ಷಗಳ ಹಿಂದೆ ಕೇಶಮುಂಡನಕ್ಕೆ ಒಳಗಾಗುತ್ತಿದ್ದವರು, ಐವತ್ತು ವರ್ಷಗಳ ಹಿಂದೆ ಮದುವೆಯಂಥ ಕಾರ್ಯದಲ್ಲಿ ಬಹಿಷ್ಕೃತರಾಗಿದ್ದವರು ಈಗ ಮರುಮದುವೆಯನ್ನೇ ಆಗುತ್ತಿದ್ದಾರೆ. ಇಂಥದ್ದರಲ್ಲಿ ಈ ಮಹಿಳೆ ಇನ್ನೊಂದು ಹೆಜ್ಜೆ ಮುಂದೆಹೋಗಿ, ಸಾಯಲು ತಯಾರಿ ನಡೆಸುವ ಅಂಗವಾಗಿ ಸಂಗಾತಿಯನ್ನೂ ಯಾಕೆ ಬಯಸಬಾರದು ಎಂದೆನಿಸಿತು. ಸಂಗಾತಿ ಇದ್ದರೆ ಸದ್ದಿಲ್ಲದೆ ಸುಖಪಡಲು ಒಪ್ಪುತ್ತಿದ್ದವರು ಸಂಗಾತಿ ಇಲ್ಲವೆಂದಾಗ ಸುಖವೂ ಇಲ್ಲವೆನ್ನುವಂತೆ ಸಾಂಗತ್ಯದ ಬಯಕೆಯನ್ನು ಹತ್ತಿಕ್ಕುವುದು ಖೇದವನ್ನುಂಟುಮಾಡಿತು. ಹಾಗಾಗಿ ಹೆಂಗಸರ ಬಗೆಗೆ ಹೆಚ್ಚಿನ ಯೋಚನೆ ಅಗತ್ಯವಿದೆ ಎನ್ನಿಸಿತು.

ಯಾವುದೇ ಸಾಂಪ್ರದಾಯಿಕ ದಾಂಪತ್ಯದ ಒಳಹೊಕ್ಕು ನೋಡಿದರೆ ಬಹುತೇಕ ಎರಡು ದೊಡ್ಡ ಕೊರತೆಗಳು ಕಂಡುಬರುತ್ತವೆ: ಲೈಂಗಿಕ ಬಯಕೆಗಳ ತೃಪ್ತಿಕರ ಈಡೇರಿಕೆ, ಹಾಗೂ ಅನ್ಯೋನ್ಯ ಸ್ನೇಹಸಂಬಂಧ. ಇವೆರಡರಲ್ಲೂ ಧನ್ಯರಾದವರು ಅಪರೂಪ. ಕಾರಣ ಸ್ಪಷ್ಟವಾಗಿದೆ: ಸಾಂಪ್ರದಾಯಿಕ ದಾಂಪತ್ಯಗಳು ಕೌಟುಂಬಿಕ ಭದ್ರತೆ, ಅನುಕೂಲತೆ, ಹಾಗೂ ಸ್ಥಿರತೆ ಒದಗಿಸುವುದಕ್ಕಾಗಿ ಮಾತ್ರ ಇವೆ. ಇಲ್ಲಿ ಕಾಮಕೂಟದ ಮುಖ್ಯ ಉದ್ದೇಶ ಸಂತಾನೋತ್ಪತ್ತಿ ಹಾಗೂ ಪುರುಷನ ಕಾಮತೃಪ್ತಿ; ಹೆಣ್ಣಿನ ಕಾಮತೃಪ್ತಿ ಮೂರನೆಯ ಸ್ಥಾನಕ್ಕೆ. ಅಲ್ಲದೆ, ಪುರುಷ ಪ್ರಧಾನ ದಾಂಪತ್ಯದಲ್ಲಿ ಸಮಾನ ಸ್ನೇಹ ಸಂಬಂಧ, ರಸಿಕತೆ ಇತ್ಯಾದಿ ಮರೀಚಿಕೆಯೆ ಸರಿ.

ವಯಸ್ಸಾದ ಒಂಟಿ ಹೆಂಗಸರಲ್ಲಿ ಮೂರು ವಿಧದವರಿದ್ದಾರೆ: ಗಂಡನನ್ನು ಕಳೆದುಕೊಂಡವರು, ಗಂಡ(ನನ್ನು) ಬಿಟ್ಟವರು, ಹಾಗೂ ಗಂಡಿಗಾಗಿ ಕಾಯುತ್ತ ವಯಸ್ಸು ಕಳೆದವರು. ಇವರಾರಿಗೂ ಒಂಟಿತನ ಆಯ್ಕೆಯಲ್ಲ, ಅನಿವಾರ್ಯ. ನನಗೆ ಗೊತ್ತಿರುವ ಸಾಕಷ್ಟು ಮಹಿಳೆಯರು ಸಾಂಪ್ರದಾಯಿಕವಾಗಿ ಹಾಕಬೇಕೆಂದು ಹಿಡಿದ ಮಾಲೆಗಳು ಬಾಡಿಹೋದಂತೆ ಅವರ ಮನಸ್ಸೂ ಬಾಡಿಹೋಗಿ ಶತಮಾನವಾಯಿತು. ಇವರೆಷ್ಟು ನೊಂದಿದ್ದಾರೆಂದರೆ, ಸುಖಸಾಂಗತ್ಯದ ನೆನಪು ತರುವ ಯಾವುದೇ ದೃಶ್ಯ ಕಂಡರೂ ಸಾಕು, ಅಸಹನೀಯ ಆಗಿಬಿಡುತ್ತದೆ. (ಅದಕ್ಕಾಗೇ ದೇವರ ಹೆಸರಿನಲ್ಲಿ ಕಠೋರ ನಿಯಮಗಳನ್ನು ಹಾಕಿಕೊಂಡು ಸ್ವತಃ ದಂಡಿಸಿಕೊಳ್ಳುವುದು ಇರಬೇಕು). ಇವರ ಸದ್ದಿಲ್ಲದ ನರಳಿಕೆ ಯಾರ ಕಿವಿಯ ಮೇಲೂ ಬೀಳುತ್ತಿಲ್ಲ. ಇವರ ಕೊನೆಗಾಲ ಹೇಗಿರಬಹುದು ಎಂದು ಊಹಿಸುವಾಗ ಹಳೆಯ ನೆನಪೊಂದು ಬರುತ್ತಿದೆ:

ನನ್ನ ಬಾಲ್ಯದಲ್ಲಿ ನನ್ನ ಸ್ನೇಹಿತನ ಚಿಕ್ಕಜ್ಜನೊಬ್ಬನಿದ್ದ. ಆತ ಕುಟುಂಬದಲ್ಲಿದ್ದರೂ ಒಂಟಿಯಾಗಿದ್ದ. ಅತಿ ಮಡಿವಂತನಾಗಿದ್ದು, ಪ್ರತಿದಿನ ಪೂಜೆ–ಪುನಸ್ಕಾರದ ಹೊರತು ನೀರನ್ನೂ ಕುಡಿಯುತ್ತಿರಲಿಲ್ಲ. ಮೈಲಿಗೆಯಾಗುವ ಆತಂಕದಿಂದ ಮಕ್ಕಳನ್ನೂ ಹತ್ತಿರ ಬರಗೊಡಿಸುತ್ತಿರಲಿಲ್ಲ. ಅವನಿಗೂ ಕೊನೆಗಾಲ ಸಮೀಪಿಸಿತು. ಆಗ ಈ ಹುಡುಗನನ್ನು ಗುಟ್ಟಾಗಿ ಕರೆದು, ಕೈಯಲ್ಲಿ ಎಂಟಾಣೆಯಿಟ್ಟು (ಬಹುಶಃ ಮೊದಲ ಸಲ) ಅವನ ತೋಳು ಮುಟ್ಟುತ್ತ ಅಂಗಲಾಚಿದ: 'ಯಾರಿಗೂ ಹೇಳಬೇಡ: ಹೋಟೆಲ್‌ನಿಂದ ನನಗೊಂದು ಮಸಾಲೆ ದೋಸೆ ತಂದುಕೊಡುತ್ತೀಯಾ?' ಅವನ ಬಯಕೆಯು ಸಹಜವಾಗಿದ್ದರೂ ಗುಟ್ಟಾಗಿಡುವ ಕಾರಣ ಸ್ಪಷ್ಟವಾಗಿದೆ. ಇಲ್ಲಿ ಮಡಿವಂತನ ದಿಟ್ಟತನವನ್ನು ಮೆಚ್ಚಲೇಬೇಕು – ಇಲ್ಲದಿದ್ದರೆ ಅವನಾತ್ಮ ಹಲುಬಬಹುದಿತ್ತು. ಮಸಾಲೆ ದೋಸೆಯಂಥ ಕ್ಷುಲ್ಲಕ ಬಯಕೆಗಳೂ ಬೃಹತ್ತಾಗಿ ಕಾಡುತ್ತವೆ ಎಂದರೆ ಸಾಂಗತ್ಯದ ಕೊರತೆ ಹೇಗಿರಬೇಡ?

ಇಳಿವಯಸ್ಸಿನಲ್ಲಿ ಹೊಸ ಸಂಬಂಧವನ್ನು ಕಟ್ಟಿಕೊಳ್ಳುವ ವಿಚಾರಕ್ಕೇ ಅನೇಕರ ಮೈಮೇಲೆ ಮುಳ್ಳುಗಳು ಬರುತ್ತವೆ. ಯಾಕೆ? ಈ ವಯಸ್ಸಿನಲ್ಲಿ ಸಂಭೋಗಕ್ಕೆ ತನ್ನ ಶರೀರ ಒಪ್ಪುತ್ತದೆಯೆ? ಈ ಭಯ ಸಹಜ. ವಿಚಿತ್ರವೆಂದರೆ ಈ ಆತಂಕ ಗಂಡಸರಿಗೂ ಇರುತ್ತದೆ! ಇದರ ಬಗೆಗೆ ನೇರವಾಗಿ ಚರ್ಚಿಸಿ, ಸಂಭೋಗದ ಸೊಲ್ಲಿಲ್ಲದ, ಅಥವಾ ಕಾಮಕೂಟವೇ ಇಲ್ಲದ ಸಂಬಂಧವನ್ನು ಆಯ್ಕೆ ಮಾಡಿಕೊಳ್ಳಬಹುದು. ಇದಕ್ಕಾಗಿ ಜನನಾಂಗಗಳೇ ಬೇಕಿಲ್ಲ. ತಬ್ಬಲು ತೋಳುಗಳು, ಮುತ್ತಿಡಲು ತುಟಿಗಳು, ಬೆಸೆಯಲು ಬೆಚ್ಚನೆಯ ಮೈ ಇದ್ದರೆ ಸಾಕೇ ಸಾಕು!

ಸಂಗಾತಿಯನ್ನು ಕಳೆದುಕೊಂಡೋ, ಸಂಗಾತಿಯಿಲ್ಲದೆಯೋ ಒಂಟಿಯಾಗಿದ್ದು ವಯಸ್ಸಾಗುತ್ತಿರುವ ಹೆಂಗಸರಿಗೆ ನನ್ನ ನೇರಮಾತು:

- ಇಷ್ಟುದಿನ ಪತಿಗೆ ನಿಷ್ಠರಾಗಿ ಬಾಳುವೆ ನಡೆಸಿದಿರಿ. ಈಗ ಅವರಿಲ್ಲ, ಆದರೆ ನೀವಿದ್ದೀರಿ. ಇನ್ನುಳಿದ ಬದುಕು ನಿಮಗಾಗಿ ಮಾತ್ರವಿದೆ.
- ಇನ್ನೊಂದು ಸಂಬಂಧದಲ್ಲಿ ಇನ್ನಷ್ಟು ಸುಖ ಬಯಸುವುದು ಮುಂಚಿನ ಸಂಬಂಧಕ್ಕೆ ದ್ರೋಹವಲ್ಲ. ಕಾಲಕಾಲಕ್ಕೆ ಹುಟ್ಟುವ ಬಯಕೆಗಳನ್ನು ಪೂರೈಸಿಕೊಳ್ಳುವುದು ಶರೀರದ ಹಕ್ಕು; ಅದನ್ನು ಪೂರೈಸುವುದು ನಿಮ್ಮ ಹೊಣೆ.
- ಸಾಯುವ ಕಾಲ ಬಂತು, ಇನ್ನೇಕೆ ಸುಖಪಡಬೇಕು ಎನ್ನುವ ಬದಲು, ಸಾಯುವ ಕಾಲ ಬಂತು, ಇನ್ನಾದರೂ ಸುಖಪಡಬೇಕು ಎಂದು ಯೋಚಿಸಿ.
- ಸಮಾಜದ ಕಟ್ಟುಪಾಡುಗಳು ಕಟ್ಟಿಹಾಕಿದ್ದರೆ ಕೊನೆಗಾಲದಲ್ಲಿ ಒದ್ದಾಡುವ ಆತ್ಮಕ್ಕೆ ಹೇಗೆ ಶಮನ ಕೊಡುವಿರಿ?
- ಈ ವಯಸ್ಸಿನಲ್ಲಿ ಸಾಂಗತ್ಯ ಕಂಡುಕೊಳ್ಳುವುದರಲ್ಲಿ ನೀವೇ ಮೊದಲಿಗರು ಯಾಕಾಗಬಾರದು? ನೀವೊಂದು ವೇಳೆ ಹೊಸ ದಾರಿ ಹಿಡಿದರೆ ನಿಮ್ಮಂಥ ಅನೇಕರಿಗೆ ದಾರಿದೀಪವಾಗುವಿರಿ.
- ಇಲ್ಲಿ ಸಾಂಪ್ರದಾಯಿಕ ಮದುವೆ, ಕೌಟುಂಬಿಕತೆ, ಬದ್ಧತೆ, ಜವಾಬ್ದಾರಿ ಇತ್ಯಾದಿ ಯಾವುದಕ್ಕೂ ಮಹತ್ವ ಕೊಡಬೇಕಿಲ್ಲ. ಸಹವಾಸ ಸಾಕು. ಇಲ್ಲದಿದ್ದರೆ ಸ್ನೇಹವಾದರೂ ಆದೀತು.
- ಇಂಥ ಸಂಬಂಧಗಳಿಗೆ ಕಾಯಂತನದ ಬಣ್ಣ ಕೊಡುವುದೂ ಬೇಡ. ತಾರುಣ್ಯದ ಶಾಶ್ವತತೆ ಈಗ ಅರ್ಥವಿಲ್ಲ. ಹೇಗಿದೆಯೋ ಹಾಗೆ, ಎಷ್ಟು ಎಟುಕುತ್ತದೋ ಅಷ್ಟು, ಆದಷ್ಟು ಕಾಲ ಅನುಭವಿಸುತ್ತ ತೃಪ್ತಿಪಡಲು ನೋಡಿ.
- ಕಿರಿಯರು ಹುಬ್ಬೇರಿಸಿದರೆ ದಿಟ್ಟತನದಿಂದ ಸ್ಪಷ್ಟೀಕರಿಸಿ. ಅವರು ಒಪ್ಪಿಕೊಳ್ಳುವುದು ಬಿಡುವುದು ನಿಮಗೆ ಸೇರಿದ್ದಲ್ಲ. ನಿಮ್ಮ ಬದುಕು ನಿಮಗೆ. ಕ್ರಮೇಣ ಅವರು ನಿಮ್ಮನ್ನು ಅರ್ಥಮಾಡಿಕೊಂಡಾರು.

ಇನ್ನು, ಇಳಿವಯಸ್ಸಿನವರ ನಡುವಿನ ನವಬಾಂಧವ್ಯ ಹೇಗಿರಬಹುದು? ಇಲ್ಲಿ ಕಾಮದಾಹ, ಕೌಟುಂಬಿಕತೆ, ಹೊಣೆಗಾರಿಕೆ – ಎಲ್ಲಕ್ಕೂ ಮಿಗಿಲಾಗಿ ಶಾಶ್ವತತೆಯ ಹಪಹಪಿ ಇಲ್ಲದಿರುವುದರಿಂದ ನೀವು ಇಷ್ಟಪಡುವ ವಿಧದ ಸ್ನೇಹವನ್ನೂ ಅನ್ಯೋನ್ಯತೆಯನ್ನು ಕಟ್ಟಿಕೊಳ್ಳಬಹುದು; ಪ್ರಣಯಪ್ರೇಮದ, ರಸಿಕತೆಯ ಜೋಡಿತನಕ್ಕೆ ಹುಟ್ಟುಹಾಕಬಹುದು. ಮುದ್ದಣಮನೋರಮೆಯರ ಸರಸದೊಡನೆ ಮೈಸೂರು ಮಲ್ಲಿಗೆಯ ಕವನಗಳನ್ನು ಹಾಡಬಹುದು!

ಒಂಟಿ ಮಹಿಳೆಯರೇ, ಏನಂತೀರಿ? ಬರೆದುಕೊಳ್ಳಿ!

ಸಂಪರ್ಕಕ್ಕೆ: 8494933888;
**Email: vinod.chebbi@gmail.com**